For more job news visit : www.kpscvaani.com

ಕರ್ನಾಟಕ ಸರ್ಕಾರ

ಸಂಖ್ಯೆ:ಕ್ರೀಪ್ರಾ/ಸಿ5/27/ 25-26
[ಭಾಗ-01]

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ಕ್ರೀಡಾ ಪ್ರಾಧಿಕಾರ ಕಾರ್ಯಾಲಯ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ
ಬೆಂಗಳೂರು -560001
ದಿನಾಂಕ : #ApprovedDate#

-: ಅಧಿಸೂಚನೆ :-

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ಕ್ರೀಡಾ ಪ್ರಾಧಿಕಾರವು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆಯಾಗಿರುತ್ತದೆ.

ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ **ಕ್ರೀಡಾವಸತಿ ನಿಲಯದ ಪ್ರತಿಭಾವಂತ ಕ್ರೀಡಾಪಟುಗಳಿಗೆ ವೈಜ್ಞಾನಿಕ ತರಬೇತಿ** ನೀಡಲು ತರಬೇತುದಾರರ ಸೇವೆಯನ್ನು ನೇಮಕಾತಿ ಆದೇಶ ನೀಡುವ ದಿನಾಂಕದಿಂದ **30-11-2026 ರವರೆಗೆ** ತಾತ್ಕಾಲಿಕವಾಗಿ ಮಾಸಿಕ ಸಂಚಿತ ವೇತನ, ಗುತ್ತಿಗೆ ಆಧಾರದ ಮೇಲೆ ಪಡೆಯಲು ಭಾರತದ ಅರ್ಹ ನಾಗರೀಕರಿಂದ ಅರ್ಜಿಯನ್ನು ಆಹ್ವಾನಿಸಿದೆ. ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕ್ರೀಡೆಯ ಹೆಸರು	ತರಬೇತುದಾರರ ಹುದ್ದೆಯ ಸಂಖ್ಯೆ
01	ಜಿಮ್ನಾಸ್ಟಿಕ್	01

ಸೂಚನೆ :

1. ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ನೇಮಕಾತಿ ಆದೇಶ ನೀಡುವ **ದಿನಾಂಕದಿಂದ 30-11-2026ರವರೆಗೆ ಮಾತ್ರ** ಇರುತ್ತದೆ.
2. ನೇಮಕಗೊಂಡವರಿಗೆ ಮಾಸಿಕ ಸಂಚಿತ ವೇತನವನ್ನು ಮಾತ್ರ ಪಾವತಿಸಲಾಗುವುದು. ಯಾವುದೇ ರೀತಿಯ ವಾರ್ಷಿಕ ವೇತನ ಬಡ್ತಿ, ಪಿಂಚಣಿ ಮತ್ತು ಸರ್ಕಾರಿ ನೌಕರರಿಗೆ ಸಿಗುವ ಇನ್ನಿತರೆ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ. ಮಾಸಿಕ ಸಂಚಿತ ವೇತನ ಮತ್ತು ಅರ್ಹತೆ ಮಾನದಂಡ ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಹುದ್ದೆಗಳ ವಿವರ	ಅರ್ಹತಾ ಮಾನದಂಡಗಳು
01	ತರಬೇತುದಾರರು	ಪದವಿ ಮತ್ತು ರಾಷ್ಟ್ರೀಯ ಕ್ರೀಡಾ ಸಂಸ್ಥೆ (ಎನ್ ಎಸ್-ಎನ್ಐಎಸ್) / ಭಾರತೀಯ ಕ್ರೀಡಾ ಪ್ರಾಧಿಕಾರ ಸಂಸ್ಥೆಯಿಂದ ಆಯಾ ಕ್ರೀಡೆಯಲ್ಲಿ ಒಂದು ವರ್ಷದ ಅವಧಿ ತರಬೇತಿಯಲ್ಲಿ ಡಿಪ್ಲೊಮೊ ಪಡೆದಿರಬೇಕು ಅಥವಾ ಏಷಿಯನ್ ಕ್ರೀಡಾಕೂಟ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಪಡೆದಿರಬೇಕು ಅಥವಾ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿರಬೇಕು. (ಮಾಸಿಕ ಸಂಚಿತ ವೇತನ ರೂ 43,956.00-00)

3. ಕನ್ನಡ ಭಾಷೆಯು ಅತ್ಯಗತ್ಯವಾಗಿರುತ್ತದೆ. 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಒಂದು ವೇಳೆ ಯಾವುದೇ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಇತರೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
4. 58 ವಯೋಮಾನದೊಳಗಿನವರು ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.
5. ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ **05-09-2026 ರಂದು ಸಂಜೆ 4.00 ಗಂಟೆಯೊಳಗೆ** ಸಲ್ಲಿಸಬೇಕಾಗಿರುತ್ತದೆ. ಅರ್ಜಿಯನ್ನು ನಿಗಧಿಪಡಿಸಿದ ದಿನಾಂಕದ ನಂತರ ಸ್ವೀಕರಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಒಂದು ವೇಳೆ ನಿಗಧಿಪಡಿಸಲಾದ ಕೊನೆಯ ದಿನಾಂಕವನ್ನು ಸಾರ್ವತ್ರಿಕ ರಜೆಯೆಂದು ಘೋಷಿಸಿದಲ್ಲಿ ಮರು ದಿನವನ್ನು ಅಂತಿಮ ದಿನಾಂಕವೆಂದು ಪರಿಗಣಿಸಲಾಗುವುದು.
6. ಅರ್ಹತೆ ಹೊಂದುವ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಲು ಮತ್ತು ತರಬೇತಿಯಲ್ಲಿ ಹೊಂದಿರುವ ಜ್ಞಾನವನ್ನು ಪರಿಶೀಲಿಸಲು ಸಂದರ್ಶನಕ್ಕೆ **ದಿನಾಂಕ ಸಮಯ ಮತ್ತು ಸ್ಥಳವನ್ನು ಪತ್ರದ ಮೂಲಕ ತಿಳಿಸಲಾಗುವುದು.** ಈ ಸಂದರ್ಭದಲ್ಲಿ ಅರ್ಜಿಯೊಂದಿಗೆ ಸಲ್ಲಿಸಲಾಗಿರುವ ದಾಖಲೆಗಳನ್ನು ನೋಟರಿ ಮಾಡಿಸಿ/ದೃಢೀಕರಿಸಿ ಹಾಜರಾಗಬೇಕಾಗಿರುತ್ತದೆ.
7. ಸಂದರ್ಶನಕ್ಕೆ ಆಹ್ವಾನಿಸದ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಮಾಹಿತಿ / ಹಿಂಬರಹ ನೀಡಲಾಗುವುದಿಲ್ಲ. ಆಯ್ಕೆ ಪ್ರಕ್ರಿಯೆಯಲ್ಲಿ ನಿಗಧಿಪಡಿಸಿರುವ ಅರ್ಹತೆ ಷರತ್ತು ಪೂರೈಸದ ಕಾರಣ ಅಂತಹ ಅಭ್ಯರ್ಥಿಗಳು ಸಂದರ್ಶನಕ್ಕೆ ಆಯ್ಕೆಯಾಗಿರುವುದಿಲ್ಲವೆಂದು ಭಾವಿಸಬೇಕಾಗಿರುತ್ತದೆ. ಈ ಸಂಬಂಧ ಯಾವುದೇ ರೀತಿಯ ಪತ್ರವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
8. ಅರ್ಜಿಯನ್ನು ಭರ್ತಿಮಾಡಿ ಅರ್ಜಿಯೊಂದಿಗೆ ಸಲ್ಲಿಸುವ ಅಗತ್ಯ ದಾಖಲೆಗಳನ್ನು ದೃಢೀಕರಣದೊಂದಿಗೆ ನೋಂದಣಿ ಅಂಚೆ ಮೂಲಕ ಮುಚ್ಚಿದ ಲಕೋಟೆಯಲ್ಲಿ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001 ಇವರಿಗೆ ಸಲ್ಲಿಸಬೇಕಾಗಿರುತ್ತದೆ. ಲಕೋಟೆಯ ಮೇಲೆ **" ಮಾಸಿಕ ಸಂಚಿತ ವೇತನ, ಗುತ್ತಿಗೆ ಆಧಾರದ ಮೇಲೆ 30-11-2026 ರವರೆಗೆ** ಹುದ್ದೆಯ ನೇಮಕಾತಿ"ಗಾಗಿ ಅರ್ಜಿಯನ್ನು ಸಲ್ಲಿಸಲಾಗುತ್ತಿದೆ ಎಂಬ ಮೇಲು ಬರಹದೊಂದಿಗೆ ಮೊಹರಾದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು.
9. ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿಮಾಡುವ ಮತ್ತು ಸಲ್ಲಿಸುವ ಮುನ್ನ ಅಧಿಸೂಚನೆಯಲ್ಲಿ ತಿಳಿಸಿರುವ ಸೂಚನೆಗಳನ್ನು ಪರಿಶೀಲಿಸಿ ನಿಗಧಿಪಡಿಸಿರುವ ಈ ಕೆಳಕಂಡ ದಾಖಲೆಗಳನ್ನು ದೃಢೀಕರಿಸಿ ಸಲ್ಲಿಸಲು ಸೂಚಿಸಿದೆ. ನಿಗಧಿಪಡಿಸಿರುವ ದಾಖಲೆಗಳು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

For more job news visit : www.kpscvaani.com

ಅ	ನಡತೆ ಪ್ರಮಾಣ ಪತ್ರ (ಅಭ್ಯರ್ಥಿಗಳಿಗೆ ಸಂಬಂಧ ಪಟ್ಟ ವ್ಯಕ್ತಿಗಳಿಂದ, ಕಾಲೇಜು / ಪದವಿ ಶಿಕ್ಷಣ) ಮೂಲ ಪ್ರತಿ.
ಆ	ಪದವಿ ಸಂಬಂಧಿಸಿದಂತೆ ಪ್ರಮಾಣ ಪತ್ರದ ಪ್ರತಿ
ಇ	ಆಯಾ ಕ್ರೀಡೆಯ ತರಬೇತಿಯಲ್ಲಿ ಒಂದು ವರ್ಷದ ಡಿಪ್ಲೊಮೊ ವನ್ನು ರಾಷ್ಟ್ರೀಯ ಕ್ರೀಡಾ ಸಂಸ್ಥೆ (ಎನ್ ಎಸ್-ಎನ್ಐಎಸ್/ಭಾಕ್ರೀಪ್ರಾ) ಪಡೆದ ಪ್ರಮಾಣ ಪತ್ರದ ಪ್ರತಿ
ಈ	ಏಷ್ಯನ್ ಕ್ರೀಡಾಕೂಟ / ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಪಡೆದ ಸಂಬಂಧ ಪ್ರಮಾಣ ಪತ್ರದ ಪ್ರತಿ
ಉ	ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಸಂಬಂಧ ಪ್ರಮಾಣ ಪತ್ರದ ಪ್ರತಿ.
ಊ	ಸಂಬಂಧಿಸಿದ ಕಾರ್ಯದಲ್ಲಿ ಅನುಭವ ಪ್ರಮಾಣ ಪತ್ರ, ತೃಪ್ತಿಕರ ಮತ್ತು ಉತ್ತಮ ನಡತೆ ಸಂಬಂಧ ಪ್ರಮಾಣ ಪತ್ರ
ಋ	ಜನನ ಪ್ರಮಾಣ ಪತ್ರ ಅಥವಾ ಎಸ್‌ಎಸ್‌ಎಲ್‌ಸಿ ಪ್ರಮಾಣ ಪತ್ರ
	ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರ
ಎ	ಭಾವಚಿತ್ರವುಳ್ಳ ಗುರುತಿನ ಚೀಟಿ (ಆಧಾರ್ ಕಾರ್ಡ್ / ಚುನಾವಣಾ ಗುರುತಿನ ಚೀಟಿ / ಪಾಸ್‌ಪೋರ್ಟ್ / ವಾಹನ ಚಾಲನೆ ಪರವಾನಗಿ / ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ನೀಡಿರುವ ಇತರೆ ಗುರುತಿನ ಚೀಟಿ

10. ಅರ್ಜಿಗೆ ಯಾವುದೇ ಶುಲ್ಕವಿರುವುದಿಲ್ಲ.
11. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಮುಂಚಿತವಾಗಿ ಅಧಿಸೂಚನೆಯಲ್ಲಿ ಅರ್ಹತಾ ಮಾನದಂಡಗಳ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಸಂಪೂರ್ಣವಾಗಿ ಅರ್ಹತಾ ಮಾನದಂಡಗಳನ್ನು ಪೂರೈಸಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
12. ಅಪೂರ್ಣ ಮತ್ತು ಸಹಿಮಾಡದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.
13. ಅಭ್ಯರ್ಥಿಗಳ ಆಯ್ಕೆಯನ್ನು ಈ ವಿಷಯವಾಗಿ ರಚಿಸಲಾಗುವ ಆಯ್ಕೆ ಸಮಿತಿಯು ನಿರ್ವಹಿಸುತ್ತದೆ.
14. ಅಂತಿಮವಾಗಿ ಆಯ್ಕೆಪ್ರಕ್ರಿಯೆಯು ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರ ವಿವೇಚನೆಗೆ ಒಳಪಟ್ಟಿರುತ್ತದೆ.
15. ಅಭ್ಯರ್ಥಿಗಳ ಅರ್ಹತಾ ಮಾನದಂಡಗಳ ವಿಷಯವಾಗಿ, ಅಭ್ಯರ್ಥಿಗಳ ಆಯ್ಕೆ ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳ ಸ್ಥಳ ನಿಯೋಜನೆ ಸಂಬಂಧವಾಗಿ ಮಹಾನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರ ನಿರ್ಧಾರವೇ ಅಂತಿಮವಾಗಿರುತ್ತದೆ
16. ನೇಮಕಾತಿಯಾದ ನಂತರ ಹಾಗು ಸಂದರ್ಭಾನುಸಾರ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರು ಅಭ್ಯರ್ಥಿಗಳನ್ನು ರಾಜ್ಯದ ಯಾವುದೇ ಸ್ಥಳಕ್ಕೆ ನಿಯುಕ್ತಿಗೊಳಿಸುವ ಅಧಿಕಾರವನ್ನು ಹೊಂದಿದ್ದು, ಇವರ ನಿರ್ಧಾರವೇ ಅಂತಿಮವಾಗಿರುತ್ತದೆ. ಈ ಸಂಬಂಧ ಆಯ್ಕೆಗೊಂಡ ಎಲ್ಲಾ ಅಭ್ಯರ್ಥಿಗಳು ಈ ನಿರ್ಧಾರಕ್ಕೆ ಬದ್ಧರಾಗಿರತಕ್ಕದ್ದು. ಆದ್ದರಿಂದ ರಾಜ್ಯದ ಯಾವುದೇ ಸ್ಥಳದಲ್ಲಿ ಕಾರ್ಯನಿರ್ವಹಿಸಲು ಸಿದ್ಧರಿರುವ ಅಭ್ಯರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು.
17. ಈ ನೇಮಕಾತಿ ಮತ್ತು ಸ್ಥಳ ನಿಯೋಜನೆ ತಾತ್ಕಾಲಿಕವಾಗಿದ್ದು, ಮುಂದಿನ ಆದೇಶಗಳಿಗೆ ಒಳಪಟ್ಟಿರುತ್ತದೆ.
18. ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರು ಈ ನೇಮಕಾತಿ ಅಧಿಸೂಚನೆಯನ್ನು ರದ್ದುಪಡಿಸುವ ಮತ್ತು ಯಾವುದೇ ಸಂದರ್ಭದಲ್ಲಿ ಆಯ್ಕೆಪ್ರಕ್ರಿಯೆಯನ್ನು ಯಾವುದೇ ಕಾರಣ ನೀಡದೆ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.
19. ಆಯ್ಕೆಗೊಂಡ ಅಭ್ಯರ್ಥಿಗಳು ರೂ 100.00 ಛಾಪಾ ಕಾಗದದಲ್ಲಿ ನೇಮಕಾತಿ ಮತ್ತು ಸ್ಥಳ ನಿಯೋಜನೆ, ಇನ್ನಿತರೆ ವಿಷಯದ ಸಂಬಂಧವಾಗಿ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರ ವಿರುದ್ಧವಾಗಿ ನ್ಯಾಯಾಲಯದಲ್ಲಿ ದಾವೆ ಹೂಡುವುದಿಲ್ಲ ಎಂದು ಮುಚ್ಚಳಿಕೆಯನ್ನು ಸಹಿಮಾಡಿ ಸಲ್ಲಿಸತಕ್ಕದ್ದು.
20. ನಕರಾತ್ಮಕವಾಗಿ ಪ್ರಚಾರಮಾಡುವ ಅಭ್ಯರ್ಥಿಗಳ ಅರ್ಜಿಯನ್ನು ಅಥವಾ ನೇಮಕಾತಿಯನ್ನು ಅನರ್ಹಗೊಳಿಸಲಾಗುವುದು.

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ಕ್ರೀಡಾ ಪ್ರಾಧಿಕಾರ

For more job news visit : www.kpscvaani.com

ಕರ್ನಾಟಕ ಸರ್ಕಾರ

ಸಂಖ್ಯೆ:ಕಕ್ರೀಪ್ರಾ/ಸಿ5/27/ 25-26
[ಭಾಗ-01]

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ಕ್ರೀಡಾ ಪ್ರಾಧಿಕಾರ ಕಾರ್ಯಾಲಯ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ
ಬೆಂಗಳೂರು -560001
ದಿನಾಂಕ : 04-09-2026

: ಅರ್ಜಿ ಆಹ್ವಾನ :

ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ತರಬೇತಿ ನೀಡಲು ನೇಮಕಾತಿ ಆದೇಶ ನೀಡುವ ದಿನಾಂಕದಿಂದ ದಿನಾಂಕ 30-11-2026 ರವರೆಗೆ ತಾತ್ಕಾಲಿಕವಾಗಿ ಮಾಸಿಕ ಸಂಚಿತ ವೇತನ, ಗುತ್ತಿಗೆ ಆಧಾರದ ಮೇಲೆ ತರಬೇತುದಾರರ ಸೇವೆ ಪಡೆಯಲು ಭಾರತದ ಅರ್ಹ ನಾಗರೀಕರಿಂದ ಅರ್ಜಿ ಆಹ್ವಾನಿಸಿದೆ. ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕ್ರೀಡೆಯ ಹೆಸರು	ತರಬೇತುದಾರರ ಹುದ್ದೆಯ ಸಂಖ್ಯೆ
01	ಜಿಮ್ನಾಸ್ಟಿಕ್	01

ಅರ್ಜಿ ಮತ್ತು ಪೂರಕ ದಾಖಲೆಗಳನ್ನು **ದಿನಾಂಕ: 15-09-2026** ರಂದು ಸಂಜೆ 4.00 ಗಂಟೆಯೊಳಗೆ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-56001 ಇವರಿಗೆ ಸಲ್ಲಿಸಬೇಕು.

ಮಾಸಿಕ ಸಂಚಿತ ವೇತನ, ವಿದ್ಯಾರ್ಹತೆ ಮತ್ತು ಇತರೆ ಅರ್ಹತಾ ಮಾನದಂಡ ವಿವರಗಳು ಮತ್ತು ಅರ್ಜಿ ನಮೂನೆ ಹಾಗೂ ಅಧಿಸೂಚನೆ ಪ್ರತಿಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೆಬ್‌ಸೈಟ್ dyes.karnataka.gov.in ನಲ್ಲಿ ಹಾಗೂ ಹೆಚ್ಚಿನ ಮಾಹಿತಿಯನ್ನು ಇಲಾಖಾ ಕಾರ್ಯಾಲಯದಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ

Digitally signed by
MASTHENAHALLY NARAYANAGOWDA ANUCHETH
Date: 04-09-2026 13:56:03

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ಕ್ರೀಡಾ ಪ್ರಾಧಿಕಾರ

For more job news visit : www.kpscvaani.com

Sports authority of Karnataka

Application for the post of _____

Candidate Aadhar No.												

01. Candidate's Name (IN CAPITAL LETTERS). Please keep one box blank between name, middle name and surname)

02. Father's/ Husband's Name (IN CAPITAL LETTER). Please keep one box blank between name, middle name and surname.

03. Date of Birth					4. Age as on 31-07-2026			
	Days	Month	Year		Days	Month	Year	

05. Category	please mark (√ tick)	06.	please mark (√ tick)

Gen	OBC	SC	ST

NS-NIS Diploma Certificate	Asian Games [Medal winners]
Commonwealth games Medal Winners]	Olympic Games [Participation]

07. currently working

[write] Yes ☐ No ☐

8. Gender (√ tick)

Male		Female	

If Yes:

Sector	Period of service / experience
Government /DYES	
Private	

For more job news visit : www.kpscvaani.com

08. Detail of Post

Post applied	(√)	Gymnastic	

09. Candidate's address for communication (In capital Letters)

Address .....

.....

.....Pin .....

Contact : Tel No. (with STD .....

Mobile No .....

E-Mail .....

10. If medallist in Asian Games / Commonwealth Games or Participation in Olympics furnish details in the following table.

Asian Games (Medal Winner)				Commonwealth Games (Medal winner)				Participation
Year	Gold	Silver	Bronze	Year	Gold	Silver	Bronze	In Olympic Games

11. Whether any inquiry, investigation, case, department or other proceeding in relation to any official case of criminal offence or allegation of moral turpitude have been initiated / pending and or the applicant has been convicted / held guilty by any court or Authority in this behalf . Yes / No.

12. Educational and Professional Qualification:

Sl No.	Qualification	University	Marks obtained	Remarks

For more job news visit : www.kpscvaani.com

1				
2				
2				

13. Any other achievement & particulars. If any (self / student)

Self-Declaration

I do hereby declare that all statement made in this application are true and correct to the best of my knowledge and belief. I understand and accepted that in the event of any information being found false or incorrect or not satisfying the prescribed eligibility criteria for the post applied for my candidature is liable to be cancelled / rejected at any stage of selection.

Place :
Date: (Signature of the applicant)